ಡಾ. ಎ. ಬಿ. ಮಲಕರೆಡ್ಡಿ.—ಡಿ.ಡಿ.ಟಿ. ಸ್ಪ್ರೇ ಮಾಡಬೇಕು ಎಂದು ಹೇಳಿದರು. ನೀರಿಗೆ ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಜನರು ಸತ್ತುಹೋಗುತ್ತಾರೆ. ಡಿ.ಡಿ.ಟಿ. ಅಲ್ಲ ; ಬ್ಲೀಚಿಂಗ್ ಪೌಡರ್ ಉಪಯೋಗಿಸಬೇಕು.

ಶ್ರೀ ವಾಟಾಳ್ ನಾಗರಾಜ್.—ನೀರಿಗೆ ಡಿ.ಡಿ.ಟಿ. ಹಾಕಬೇಕು ಎಂದು ಹೇಳಲಿಲ್ಲ. ಸ್ವಚ್ಛ ಮಾಡುವುದಕ್ಕೆ ಅದು.

ಶ್ರೀ ಟಿ. ಬಿ. ಜಯಚಂದ್ರ.—ಅದನ್ನೂ ಕೂಡ ಸ್ವಚ್ಛ ಮಾಡುವುದಕ್ಕೆ ಉಪಯೋಗಿಸುತ್ತಾರೆ.

ಶ್ರೀ ಎ. ಬಿ. ಮಲಕರೆಡ್ಡಿ.—ಡಿ.ಡಿ.ಟಿ. ಕೊಳಚೆ ಪ್ರದೇಶದಲ್ಲಿ ಉಪಯೋಗಿಸುವುದು.

ಶ್ರೀ ಎಂ. ವೀರಪ್ಪ ಮೋಯಿಲಿ.—ಮಾನ್ಯ ಸದಸ್ಯರು ಹುಳಿಯಾರಿನಲ್ಲಿ ನಡೆದಿರುವ ಅನಾಹುತದ ಬಗ್ಗೆ ಹೇಳಿದ್ದಾರೆ. ಆ ಬಗ್ಗೆ ತಕ್ಷಣ ವರದಿ ತರಿಸುತ್ತೇವೆ,

(ಹಲವು ಸದಸ್ಯರು ಒಮ್ಮೆಲೇ ಎದ್ದು ಮಾತನಾಡತೊಡಗಿದರು)

ಅಧ್ಯಕ್ಷರು.—ಆರ್ಡರ್, ಆರ್ಡರ್.

ಶ್ರೀ ಎಂ. ವೀರಪ್ಪ ಮೋಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹುಳಿಯಾರಿನಲ್ಲಿ ಕಾಲರ ಬಂದಿದೆ ಎಂದು ಶಂಕೆ ವ್ಯಕ್ತಪಡಿಸಿ.....

ಶ್ರೀ ವಾಟಾಳ್ ನಾಗರಾಜ್.—ಶಂಕೆ ಅಲ್ಲ ; ಸತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಇವತ್ತು ಸಂಜೆಯೊಳಗೆ ಒಂದು ವರದಿಯನ್ನು ಸದನಕ್ಕೆ ಒಪ್ಪಿಸುತ್ತೇವೆ. ಎರಡನೆಯದಾಗಿ ಏನು ಜಾಗೃತ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ಸರ್ಕಾರ ತಕ್ಷಣ ತೆಗೆದುಕೊಳ್ಳುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ.—ಮಾನ್ಯ ಅಧ್ಯಕ್ಷರೆ, ಕಾಲರಾದಿಂದ ಔರಾದ್‌ನಲ್ಲಿ ಆರು ಜನ, ಬೀದರ್‌ನಲ್ಲಿ ನಾಲ್ಕು ಜನ ಸತ್ತಿದ್ದಾರೆ. ಇದರ ಬಗ್ಗೆ ತನಿಖೆ ಮಾಡಿಸಬೇಕು.

ಅಧ್ಯಕ್ಷರು.—ಬರೆದು ಕಳುಹಿಸಿಕೊಡಿ. The Government should take serious note on various mentions made here by the hon. Members and the attention of the Hon. Minister for Health should be drawn to it. Cholera is an epidemic disease. The Government should take preventive measures, immediately.

ಗಮನ ಸೆಳೆಯುವ ಸೂಚನೆಗಳು

ಕನಕಪುರ ತಾಲ್ಲೂಕಿನಲ್ಲಿ ಸರ್ಕಾರಿ ಭೂಮಿಯಲ್ಲಿ ಕೆಂಪು ಬಣ್ಣದ ಕಲ್ಲುಗಳನ್ನು ಅಕ್ರಮವಾಗಿ ತೆಗೆದು ಹೊರದೇಶಕ್ಕೆ ಸಾಗಿಸುತ್ತಿರುವುದು

ಶ್ರೀ ಬಿ. ಕೆ. ಶಿವಕುಮಾರ್ (ಸಾತನೂರು).—ಮಾನ್ಯ ಅಧ್ಯಕ್ಷರೆ, ಕನಕಪುರ ತಾಲ್ಲೂಕಿನಲ್ಲಿ ಸರ್ಕಾರಿ ಭೂಮಿಯಲ್ಲಿ ಕೆಂಪು ಬಣ್ಣದ ಕಲ್ಲುಗಳನ್ನು ಅಕ್ರಮವಾಗಿ ತೆಗೆದು ಹೊರದೇಶಕ್ಕೆ ಸಾಗಿಸುತ್ತಿರುವ ಬಗ್ಗೆ ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರ ಗಮನವನ್ನು ಸೆಳೆಯುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳ ಪರವಾಗಿ),—ಮಾನ್ಯ ಅಧ್ಯಕ್ಷರೆ, ಕ್ಷಮಿಸಿ. ಈ ಹೇಳಿಕೆ ಇಂಗ್ಲೀಷಿನಲ್ಲಿದೆ. ಇನ್ನು ಮುಂದೆ ಕನ್ನಡದಲ್ಲಿ ಕೊಡುವ ಪ್ರಯತ್ನ ಮಾಡುತ್ತೇವೆ.

The Department of Mines and Geology had granted 12 quarrying leases in different parts of Kanakapura Taluk, Bangalore District for Pink Granite in Government lands, out of which 9 leases were granted to M/s Mysore Minerals Limited, the remaining three leases were granted to private persons in 1980-81. The total extent comprising 12 quarry leases is about 466 Acres. Major portion of the quarried material is for export. In March 1990, Government

received a complaint alleging illegal quarrying and transportation of Pink Granite from Kanakapura and other places by M/S Richard and company and others. As a follow-up action to see whether the said company has exported pink granite the matter was referred to the Senior Geologist, Department of Mines and Geology, Dakshina Kannada Division. The Senior Geologist has reported that certain quantities of granite shipped in the name of M/S G. M. Richard and Company and M/S Rock ages from New Mangalore Port. Since the origin of the granite is not specified, the Senior Geologist has been informed to collect the details from the authorities concerned. Further the Mangalore Office of M/S Mysore Minerals Limited has also been requested to collect and forward the details. These details are awaited.

Apart from this, the Revenue Department has already initiated action to raid several parts of the Kanakapura Taluk, where illegal quarrying of Pink granite had been taking place on Government land. The Deputy Commissioner, Bangalore (Rural) with the assistance of Superintendent of Police impounded several granite blocks quarried illegally and also filed criminal case against persons involved in these activities. Further, M/S Mysore Minerals Limited was directed to take possession immediatelv of the illegal quarried blocks as the Revenue authorities reported that the Pink granite so extracted was from Government land. These granites now have been the property of Mysore Minerals Limited and those who illegally extracted the mineral cannot claim any compensation and on the contrary they would be facing criminal cases already filed against them.

ಶ್ರೀ ಬಿ. ಕೆ. ಶಿವಕುಮಾರ್.— ಸ್ವಾಮಿ, ಇದನ್ನು ನಾನು ಒಪ್ಪುತ್ತೇನೆ ಈಗ ಕೊಟ್ಟಿರುವ ಸರ್ಕಾರದ ವರದಿಯ ಪ್ರಕಾರ ನಮ್ಮ ತಾಲ್ಲೂಕಿನಲ್ಲಿ ೧೨ ಕ್ವಾರಿಗಳ ಲೀಸ್ ಬಗ್ಗೆ ಳ್ಳಿ೦ ಎಕರೆ ಮಂಜೂರಾತಿ ಮಾಡಲಾಗಿದೆ ಎಂಬುದಾಗಿ ಹೇಳಿದ್ದಾರೆ. ಆದರೆ ನಾನು ಹೇಳಿದಹಾಗೆ ೧೮೦ ಕ್ವಾರೀಸ್ ನಮ್ಮ ತಾಲ್ಲೂಕಿನಲ್ಲಿ ನಡೆಯುತ್ತಿವೆ. ಆದರಲ್ಲಿ ೧೨ ಕ್ವಾರೀಸ್ ಲೀಸ್‌ನಲ್ಲಿರಬಹುದು. ೩೦-೪೦ ಸ್ವಂತದ್ದು ಎಂಬುದಾಗಿ ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡು ಕಾನೂನು ಪ್ರಕಾರ ನಡೆಯುತ್ತಿರಬಹುದು, ಆದರೆ ಕಾನೂನು ಬಾಹಿರವಾಗಿ ಇರತಕ್ಕಂತಹದ್ದನ್ನು ಹೇಳುವವರು, ಕೇಳುವವರು ಯಾರೂ ಇಲ್ಲದಂತಾಗಿದೆ. ನಮ್ಮ ಕನಕಪುರ ತಾಲ್ಲೂಕಿನಲ್ಲಿ ಹಗಲು ದರೋಡೆ ನಡೆಯುತ್ತಿದೆ. ಬೆಳ್ಳಿಗ್ಗೆ ೬ ಗಂಟೆಯಿಂದ ಸಂಜೆ ೬ಗಂಟೆಯವರೆಗೆ ಹಗಲು ದರೋಡೆ ನಡೆದು ಪ್ರತಿ ದಿನ ಸರ್ಕಾರಿ ಭೂಮಿಯಲ್ಲಿರುವಂತಹ ೭೦ ಟ್ರಕ್ ಕಲ್ಲು ಮಂಗಳೂರಿಗೆ ಸಾಗಣಿಕೆಯಾಗುತ್ತಿದೆ. ಕೊನೆಯ ಪಕ್ಷ ಒಂದು ಬ್ಲಾಕ್ ಕಲ್ಲು ಮೂರು ಮೀಟರ್ ಇರುತ್ತದೆ. ಆ ಮೂರು ಮೀಟರ್ ಒಂದು ಕಲ್ಲಿಗೆ ೧೮ ಸಾವಿರ ರೂಪಾಯಿಗಳಾಗುತ್ತದೆ. ಒಟ್ಟು ೧೨,೬೦,೦೦೦ ರೂಪಾಯಿಗಳ ಬೆಲೆ ಬಾಳುವ ಕಲ್ಲು ಪ್ರತಿದಿನ ಮಂಗಳೂರು ಪೋರ್ಟನ್ನು ತಲುಪುತ್ತದೆ. ಈಗಾಗಲೆ ನಮ್ಮ ಸರ್ಕಾರ ಒಂದು ಮೀಟರ್‌ಗೆ ೬೦-೦೦ ರೂಪಾಯಿಗಳನ್ನು ಕಲೆಕ್ಟ್ ಮಾಡಬೇಕೆಂದು ಆದೇಶಮಾಡಿದೆ. ಆದರಂತೆ ಕಲೆಕ್ಟ್ ಮಾಡಿದರೂ ೧ ೨೦,೦೦೦ ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಕಟ್ಟಬೇಕಾದಂಥ ಪರಿಸ್ಥಿತಿ ಬರುತ್ತದೆ. ಸರ್ಕಾರದ ಜಮೀನಿನಲ್ಲಿದ್ದ ಕಲ್ಲುಗಳನ್ನು ತೆಗೆದುಕೊಂಡು ಹೋಗಿರುವುದಕ್ಕೆ ಇಷ್ಟೆಲ್ಲ ಹಣವನ್ನು ಸರ್ಕಾರಕ್ಕೆ ಕಟ್ಟಬೇಕಾಗುತ್ತದೆ. ೧೮೦ ಕ್ವಾರೀಸ್‌ನಲ್ಲಿ ೧೪೦ ಕ್ವಾರೀಸ್ ಕಾನೂನುಬಾಹಿರವಾಗಿ ನಡೆಯುತ್ತಿವೆ. ಹೇಳುವವರಿಲ್ಲ, ಕೇಳುವವರಿಲ್ಲ. ನಮ್ಮ ತಾಲ್ಲೂಕಿನಲ್ಲಿ ಟೈಲರುಗಳು ಒಬ್ಬರೂ ಇಲ್ಲ, ಅಜಾಮರು ಒಬ್ಬರೂ ಇಲ್ಲ ರಾಜಕಾರಣಿಗಳು ಎಲ್ಲ ವ್ಯವಹಾರವನ್ನು ಬಿಟ್ಟು ಕಲ್ಲು ವ್ಯಾಪಾರ ಹಿಡಿದಿದ್ದಾರೆ. ಹೋಟೆಲ್ ಮಾಲೀಕರು, ಉಪಾಧ್ಯಾಯರು ಇವರೆಲ್ಲರೂ ಅವರ ಉದ್ಯಮವನ್ನು ಬಿಟ್ಟು ಕಲ್ಲು ವ್ಯಾಪಾರಕ್ಕೆ ಇಳಿದಿದ್ದಾರೆ ಹೇಳುವವರಿಲ್ಲ, ಕೇಳುವವರಿಲ್ಲ. ಸರ್ಕಾರಿ ಭೂಮಿ ಇರಲಿ, ನೀರವಾಗಿ ಹೋಗಿ, ದೌರ್ಜನ್ಯದಿಂದ ಕಲ್ಲು ತೆಗೆಯುವುದು.

ಅಧ್ಯಕ್ಷರು.— ಕಲ್ಲು ನುಂಗುತ್ತಿದ್ದಾರೆಂದು ಹೇಳುತ್ತೀರ.....

ಶ್ರೀ ಬಿ. ಕೆ. ಶಿವಕುಮಾರ್.— ಏಕೆಂದರೆ ಕಲ್ಲು ನುಂಗುವಂಥ ಪರಿಸ್ಥಿತಿ ಬಂದು ಬಿಟ್ಟಿದೆ. ಒಂದು ವರ್ಷದಿಂದೀಚೆಗೆ ಒಬ್ಬೊಬ್ಬರು ೫—೬ ಬಿಲ್ಡಿಂಗುಗಳನ್ನು ಕಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳ ಹೋದ ಶಿಬಿಗಳು ಅಲ್ಲಿಗೆ ಅನಿರೀಕ್ಷಿತವಾಗಿ ಹೋಗಿ ೧೧ ಜನ ಖದೀಮರನ್ನು ಅರೆಸ್ಟ್ ಮಾಡಿದ್ದಾರೆ. ಅದು ಆದ ತಕ್ಷಣ ಸ್ವಲ್ಪ ಮಟ್ಟಿಗೆ ನಿಂತಿತ್ತು. ನಂತರ ಅವರ ವರ್ಗಾವಾಣೆಯಾಯಿತು. ಈಗ ಇದ್ದಕ್ಕಿದ್ದ ಹಾಗೆ ಒಂದೆರಡು ತಿಂಗಳಿಂದ ಪುನಃ ಜಾಸ್ತಿಯಾಗಿದೆ. ಪ್ರತಿ ದಿನ ೭೦ ಲಾರಿ ಕಲ್ಲು ಸಾಗಾಣಿಕೆಯಾಗುತ್ತಿದೆ. ಇದನ್ನು ತಡೆಗಟ್ಟುವ ಬಗ್ಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕಂದಾಯ ಇಲಾಖೆ ಹಾಗೂ ಪೋಲೀಸ್ ಇಲಾಖೆ ಈ ಮೂರು ಇಲಾಖೆಗಳು ಸೇರಿ ರೈಡ್ ಮಾಡಿದರೆ ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ, ಸರ್ಕಾರಕ್ಕೆ ೧೨ ಲಕ್ಷ ರೂಪಾಯಿಗಳ ಬೆಲೆ ಬಾಳುವ ಸ್ವತ್ತು ಅದು ಕನಕಪುರದ ಕಲ್ಲಿಗೆ ಬಹಳ ವಿಶೇಷವಾದ ಬೆಲೆ ಇದೆ. ಇವತ್ತು ಪ್ರಪಂಚದ ಮೂಲೆಯಲ್ಲೂ ಬಹಳ ಪವಿತ್ರವಾದ ಕಲ್ಲು ಅಂದರೆ ಕನಕಪುರದ ಕಲ್ಲು. ಇನ್ನೂ ೫—೪ ವರ್ಷ ಇದೇ ರೀತಿ ನಡೆಯುವುದಕ್ಕೆ ಬಿಟ್ಟರೆ ಅಲ್ಲಿರತಕ್ಕ ಕಲ್ಲೇ ಮುಗಿದುಹೋಗುತ್ತದೆ, ಆಕ್ಕಪಕ್ಕದಲ್ಲಿರುವಂತಹವರು ಸ್ವಂತ ಜವಿೂನಿನಲ್ಲಿ ಕಲ್ಲು ಮಾಡುತ್ತಿದ್ದೇವೆ ಎಂಬುದಾಗಿ ಕೋರ್ಟಿನಲ್ಲಿ ಸ್ಟೇ ತೆಗೆದುಕೊಳ್ಳುವುದು, ಪಕ್ಕದಲ್ಲಿರುವ ಸರ್ಕಾರಿ ಭೂಮಿಯನ್ನು ಇವರ ಲೆಕ್ಕದಲ್ಲಿ ತೋರಿಸುವುದು ಇದೆಲ್ಲಾ ನಡೆಯುತ್ತದೆ ಹೇಳುವವರಿಲ್ಲ, ಕೇಳುವವರಿಲ್ಲ. ದಯಾಮಾಡಿ ಸರ್ಕಾರ ಇದನ್ನು ತೀವ್ರವಾಗಿ ಪರಿಗಣಿಸಬೇಕು ಮಾನ್ಯ ಅಧ್ಯಕ್ಷರೆ, ಮೊನ್ನೆ ಕೆಲವು ಪತ್ರಿಕೆಗಳಲ್ಲಿ ನಮ್ಮ ಹೆಸರುಗಳನ್ನು ಹಾಕಿದ್ದರು. ತಮ್ಮ ಹೆಸರನ್ನೂ ಹಾಕಿದ್ದುದು ತಪ್ಪಾಗಿ ಗೊತ್ತಿರಬಹುದು. ಕಲ್ಲಿನ ರಾಜಕಾರಿಣಿಗಳು ಅಂತ. ನಮಗೂ ಅದಕ್ಕೂ ಯಾವುದೇ ಸಂಬಂಧವಿಲ್ಲ. ಮೊನ್ನೆ ಕೌನ್ಸಿಲ್‌ನಲ್ಲೂ ಸಹ ಇದಕ್ಕೆಲ್ಲಾ ನಾವು ಸಹಾಯಮಾಡುತ್ತಿದ್ದೇವೆಂದು ನಮ್ಮ ಹೆಸರನ್ನು ಹೇಳಿದರಂತೆ ಇದಕ್ಕೆ ನಮ್ಮ ವಿರೋಧ ಬಹಳ ಇದೆ. ಆದ್ದರಿಂದ ದಯಾಮಾಡಿ ಸರ್ಕಾರ ಇದನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು ಈ ೩ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಿ ಅನಧಿಕೃತವಾಗಿರುವಂತಹ ಕ್ವಾರೀಗಳನ್ನು ಒಂದು ವಾರದಲ್ಲಿ ಸ್ಟಾಪ್ ಮಾಡಲಿಲ್ಲವೆಂದರೆ ಸರ್ಕಾರಕ್ಕೆ ತೊಂದರೆಯಾಗುತ್ತದೆ. ಮತ್ತು ನಮ್ಮ ದೇಶದ ಸಂಪತ್ತು ಕೂಡ ನಾಶವಾಗಲಿಕ್ಕೆ ಕಾರಣವಾಗುತ್ತದೆ. ಯಾರು ಯಾರು ಇದರಲ್ಲಿ ಪಾಲುದಾರರಾಗಿದ್ದಾರೆ ಅವರಿಗೆ ಶಿಕ್ಷೆ ಮಾಡಿ ಸರ್ಕಾರದ ಭೂಮಿಯನ್ನು, ಸಂಪತ್ತನ್ನು ಕಾಪಾಡಬೇಕೆಂದು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ.....

MR. SPEAKER.— Order, Order, .

ಶ್ರೀ ವಾಟಾಳ್ ನಾಗರಾಜ್.— ಇದು ಬಹಳ ಪ್ರಾಮುಖ್ಯವಾದ ವಿಚಾರ.

MR. SPEAKER.— It will not go into the records.

SRI. VATAL NAGARAJ. SIR,...

MR. SPEAKER. I call the hon'ble member to order. Now I call the hon'ble member SRI. M. S. PATIL.

ಶ್ರೀ ವಂಟ್ಲಾರಿಗೌಡ, ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೇ, ತಾವು ಏಷ್ಟು ಹೇಳಿದರೂ ಅವರು ಕೇಳುತ್ತಿಲ್ಲ. ಸದನದಲ್ಲಿ ಅವರ ವರ್ತನೆ ಸರಿಯಿಲ್ಲ. ತಾವು ಅವರಿಗೆ ಎಚ್ಚರಿಕೆ ಕೊಡಬೇಕೆಂದು ಹೇಳುತ್ತೇನೆ.

SRI VATAL NAGARAJ: Sir,.....

(ಗೊಂದಲ)

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಗಳು ಪ್ರಸ್ತಾವಕ್ಕೆ ಬಂದಾಗ ಯಾವ ಸದಸ್ಯರು ಅಥವ ಯಾವ ಸದಸ್ಯರುಗಳು ತಮ್ಮ ಗಮನ ಸೆಳೆವ ಸೂಚನೆಗೆ ತಮ್ಮ ಸಹಿಯನ್ನು ಹಾಕಿರುತ್ತಾರೋ, ಯಾರ ಹೆಸರುಗಳು ನಮೂದಿತವಾಗಿದೆಯೋ ಅಂತಹವರನ್ನು ಮಾತ್ರ ಕರೆಯಬೇಕೂ ಎನ್ನುವ ನಿಯಮವನ್ನು ನಾನು ಈ ಪೀಠದಲ್ಲಿ ಬಂದು ಕುಳಿತ ದಿವಸದಿಂದಲೂ ಅನುಸರಿಸಿ ಕೊಂಡು ಬಂದಿದ್ದೇನೆ. ವಿಚಾರದ ಪ್ರಾಮುಖ್ಯತೆ ಆ ಪ್ರಾಮುಖ್ಯತೆ ನನ್ನ ದೃಷ್ಟಿಯಲ್ಲಿ ಆ ಪ್ರಕೃತ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಇದೇ ವಿಚಾರದಲ್ಲಿ ಈ ಸದನದಲ್ಲಿ ೧೮೦ ನಿಮಿಷ ಮಾತನಾಡತಕ್ಕ ಅವಕಾಶವನ್ನು ನಾನು ಕಲ್ಪಿಸಿಕೊಟ್ಟಿದ್ದೇನೆ, ಆದುದರಿಂದ ಈ ಸದನವೇ ಶೀರ್ಮಾನ ಮಾಡಬೇಕು. ಈಗ ಮಾನ್ಯ ಶಿವಕುಮಾರ್ ಅವರು ಪ್ರಸ್ತಾಪ ಮಾಡಿದ್ದಾರೆ. ಇವರಿಗೆ ಮಾನ್ಯ ಮಂತ್ರಿಯವರು ಈಗ ಉತ್ತರ ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕನಕಪುರ ತಾಲ್ಲೂಕಿನಲ್ಲಿ ಏನು ಅಕ್ರಮ ಕ್ವಾರಿ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಅದನ್ನು ತಡೆ ಹಿಡಿದು ನಿಲ್ಲಿಸತಕ್ಕ ಬಗ್ಗೆ ಎಲ್ಲಾ ಉಗ್ರ ಕಾರ್ಯಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಯಾರು ಯಾರು ಇಂತಹ ಅಕ್ರಮ ವ್ಯವಹಾರ ಮಾಡುತ್ತಿದ್ದಾರೆ ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕುತ್ತಿದ್ದೇವೆ. ಮಾನ್ಯ ಸದಸ್ಯರು ಈ ಜನ ಕಂದಾಯ ಭೂಮಿಯಲ್ಲಿ ಅಕ್ರಮವಾಗಿ ಕ್ವಾರಿ ಮಾಡುತ್ತಿದ್ದಾರೆಂದು ಹೇಳಿದರು. ರೆವಿನ್ಯೂ ಇಲಾಖೆಯವರು, ಅದಕ್ಕೆ ಸಂಬಂಧಪಟ್ಟವರು ಇದರ ಬಗ್ಗೆ ತಕ್ಷಣ ಡಿಟೆಕ್ಟ್ ಮಾಡಬೇಕಾಗಿತ್ತು. ಬಹುಶಃ ಇದರಲ್ಲಿ ಸ್ವಲ್ಪ ಲೋಪದೋಷ ಇದೆ. ಈ ಬಗ್ಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆ ವತಿಯಿಂದ ಕಂದಾಯ ಇಲಾಖೆಗೆ ಪತ್ರ ಕೂಡಾ ಬರೆದಿದ್ದೇವೆ. ಏಕೆ ಡಿಟೆಕ್ಟ್ ಆಗಲಿಲ್ಲ, ಎಲ್ಲಿ ಲೋಪ ದೋಷ ಇದೆ, ಎಲ್ಲಿ ಅವರ ಅಧ್ಯಕ್ಷತೆ ಇದೆ ಎಂದು ನಾವು ಈಗಾಗಲೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಪತ್ರವನ್ನು ಬರೆದಿದ್ದೇನೆ. ಆದ್ದರಿಂದ ಇದರಲ್ಲಿ ಮೂಲಭೂತವಾಗಿ ಏನಿದೆ ಎಂದರೆ, ಮಾನ್ಯ ಸದಸ್ಯರು ಹೇಳಿದ ಪ್ರಕಾರ ಇಲ್ಲಿ ಎರಡು ಇಲಾಖೆಗಳು ಬರುತ್ತವೆ.

ಒಂದು ಡೈರೆಕ್ಟರ್ ಆಫ್ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್. ಅವರು ಎಲ್ಲಿ ಪಿಕ್ಚರ್‌ಗೆ ಬರುತ್ತಾರೆಂದರೆ ಲೀಸ್‌ಗೆ ಕೊಟ್ಟಾಗ ಪಿಕ್ಕರ್‌ಗೆ ಬರುತ್ತಾರೆ. ಅಥವಾ ಇಲ್ಲೀಗಲ್ ಕ್ವಾರಿ ಆದರೆ ಅದನ್ನು ನಿಲ್ಲಿಸತಕ್ಕ ಪರಿಸ್ಥಿತಿ ಬರುತ್ತದೆ. ಆದರೆ ಇದು ಸತತವಾಗಿ ನಡೆಯುತ್ತಿರುವುದರಿಂದ ಅದು ಕಂದಾಯ ಇಲಾಖೆಯ ಭೂಮಿಯಾಗಿರುವುದರಿಂದ, ಕಂದಾಯ ಇಲಾಖೆಯ ಕರ್ತವ್ಯವೂ ಇದೆ. ಅದನ್ನು ತಕ್ಷಣ ಮೈನ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ಗೆ ವರದಿ ಮಾಡಬೇಕು. ಇದರಲ್ಲಿ ಏನಾದರೂ ಲೋಪವಿದ್ದರೆ ಅಧಿಕಾರಿಗಳ ಮೇಲೆ ಕೂಡ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದೆ ಮುಂದೆ ನೋಡುವುದಿಲ್ಲ. ಆದ್ದರಿಂದ ಈಗ ಏನು ಕೆಲವು ಸಮಯದಿಂದ ಅವ್ಯಾಹತವಾಗಿ ನಡೆಯುತ್ತಿತ್ತು ಎಂದು ಇದೆ ಈಗ ಅದು ನಿಂತು ಹೋಗಿದೆ: ಮತ್ತೆ ಬಿಗಿಯಾವ ಕ್ರಮವನ್ನು ತೆಗೆದುಕೊಂಡು ಅದನ್ನು ತಡೆ ಹಿಡಿಯುವುದಕ್ಕೆ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಕೆ. ಶಿವಕುಮಾರ್.—ಇದನ್ನು ನಿಲ್ಲಿಸಲಿಕ್ಕೆ ಸರ್ಕಾರದಿಂದ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಬೇಕು, ಏಕೆಂದರೆ, ಪೋಲೀಸ್ ಇಲಾಖೆಯ ರಕ್ಷಣೆ ಇಲ್ಲದೆ ರೆವಿನ್ಯೂ ಇಲಾಖೆಯವರಾಗಲಿ ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್‌ನವರಾಗಲಿ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಈ ಮೂರೂ ಇಲಾಖೆಗಳನ್ನು ಸೇರಿಸಿ ಒಂದು ಸ್ಪೆಷಲ್ ಸ್ಕ್ವಾಡ್ ಮಾಡುವುದಾದರೆ ಸಾಧ್ಯ. ಇಲ್ಲದಿದ್ದರೆ ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಕಂದಾಯ ಇಲಾಖೆಗೆ ಟೈಮ್ ಇರುವುದಿಲ್ಲ. ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿನವರು ಬೆಂಗಳೂರಿನಿಂದ ಅಲ್ಲಿಗೆ ಬರುವುದಕ್ಕಾಗುವುದಿಲ್ಲ. ಅಲ್ಲಿ ಸಪರೇಟ್ ಆಫೀಸ್ ಇಲ್ಲ. ಪೋಲೀಸ್ ಇಲಾಖೆ, ಕಂದಾಯ ಇಲಾಖೆ ಮತ್ತು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟ್ ಈ ಮೂರು ಇಲಾಖೆಗಳನ್ನು ಒಟ್ಟಿಗೆ ಸೇರಿಸಿ ಒಂದು ಸ್ಪೆಷಲ್ ಸ್ಕ್ವಾಡ್ ಮಾಡಿದರೆ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದಿದ್ದರೆ ಕಷ್ಟವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೆ, ಅಪಾರವಾದ ಗಣಿ ಸಂಪತ್ತನ್ನು ಅಪಹರಿಸತಕ್ಕ ದೊಡ್ಡ ದೊಡ್ಡ ತಂಡಗಳು ಅಲ್ಲಲ್ಲಿ ತಯಾರಾಗಿವೆ. ಬಹುಶಃ ಮೂಲಭೂತವಾಗಿ ಗಣಿ ಮತ್ತು ಅರಣ್ಯ ಇಲಾಖೆಯನ್ನು ಸುಸಜ್ಜಿತಗೊಳಿಸತಕ್ಕ ಒಂದು ಪ್ರಸ್ತಾವ ಕೂಡ ಸರ್ಕಾರದಲ್ಲಿದೆ. ಎಲ್ಲಿ ಅಕ್ರಮವಾಗಿ ಕಳ್ಳಸಾಗಾಣಿಕೆ ನಡೆಯುತ್ತಿದೆ ಅದನ್ನು ತಡೆಗಟ್ಟಲು ಒಂದು ಮೊಬೈಲ್ ಸ್ಕ್ವಾಡ್ ಮಾಡಬೇಕೇ ಅಥವಾ ಇದು ಎಲ್ಲಿ ಕೇಂದ್ರೀಕೃತವಾಗಿದೆ ಅಲ್ಲಿ ಯಾವ ರೀತಿಯಲ್ಲಿ ಇಲಾಖೆಯನ್ನು ಸಜ್ಜುಗೊಳಿಸಬೇಕು ಎಂದು ಸರ್ಕಾರದಲ್ಲೂ ಪ್ರಸ್ತಾವನೆ ಇದೆ ಮತ್ತು ಸುಸಜ್ಜಿತವಾದ ಒಂದು ಪಡೆಯನ್ನು ಮಾಡಿಕೊಂಡರೆ ಅಕ್ರಮವಾಗಿ ಮಾಡತಕ್ಕ ವ್ಯವಹಾರಗಳು ಏನಿವೆ ಅವುಗಳನ್ನು ನಿಲ್ಲಿಸಲಿಕ್ಕೆ ಸಾಧ್ಯವಾಗುತ್ತದೆ.

(ii) ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ ದಂಟಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ತಮಿಳುನಾಡಿನ ಡಂಕಣಿಕೋಟೆ ತಾಲ್ಲೂಕಿನ ನೂರಾರು ರೈತರು ಅಕ್ರಮವಾಗಿ ಸಾಗು ಮಾಡಲು ಗಿಡಮರಗಳನ್ನು ಕಡಿಯುತ್ತಿರುವ ಬಗ್ಗೆ

ಶ್ರೀ ಜಿ. ರಾಜುಡಗೌಡ (ಹಾನೂರು).—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು ದಂಟಿಹಳ್ಳಿ ಕಾಯ್ದಿಟ್ಟ ಅರಣ್ಯ ಪ್ರದೇಶದಲ್ಲಿ ತಮಿಳುನಾಡಿನ ಡಂಕಣಿಕೋಟೆ ತಾಲ್ಲೂಕಿನ ವಂಜಗಾನಹಳ್ಳಿ, ಬೈಲಪಟ್ಟಿ, ಕೆಸ್ತೂರು, ಬೀದರಹಳ್ಳಿ ಮತ್ತು ಮೋಟೂರು ಗ್ರಾಮದ ಜನಗಳು ಅಕ್ರಮವಾಗಿ ಸಾಗುವಳಿ ಮಾಡಲು ಗಿಡಮರಗಳನ್ನು ಕಡಿಯುತ್ತಿರುವ ಬಗ್ಗೆ ಮಾನ್ಯ ಅರಣ್ಯ ಮತ್ತು ಪಶು ಸಂಗೋಪನಾ ಸಚಿವರ ಗಮನವನ್ನು ಸೆಳೆಯುತ್ತೇನೆ.